ವಾದ ನಡೆಯುತ್ತಿರುವಾಗ– ಸುಮ್ಮನಿರಲಾರದೆ ಇರುವೆ ಬಿಟ್ಟುಕೊಂಡರು ಎಂಬಂತೆ ನಾನು, 'ಅಯ್ಯೋ ಗೋಳುಕರೆ ಧಾರಾವಾಹಿಗಳನ್ನು ಏಕೆ ನೋಡುತ್ತೀರಾ ಅಷ್ಟಿಷ್ಟು ನಗಿಸುವ ಷೋಗಳನ್ನು ನೋಡಿಬಿಡಿ' ಎಂದು ಸಹಮತಿ ಸೂಚಿಸಿದೆ. ತಗೊಳ್ಳಿ ಶುರುವಾಯಿತು ಕಾಮಿಡಿ ಷೋಗಳ ಅಟ್ಟಹಾಸ. ಹಾಸ್ಯದ ಹೆಸರಿನಲ್ಲಿ ಅಶ್ಲೀಲತೆಯ ಯಶಸ್ವಿ ಪ್ರಯೋಗ. ಒಂದು ಪಾತ್ರವಾದರೂ ದ್ವಂದ್ವಾರ್ಥವಿಲ್ಲದ ನೆಟ್ಟನ ಮಾತು ಆಡಿದ್ದರೆ ಹೇಳಿ. ಪಾತ್ರವೊಂದು ಪ್ರವೇಶಿಸುತ್ತಿರುವಾಗಲೇ ಅಸಹ್ಯವಾದ ಭಂಗಿಯನ್ನು ಪ್ರದರ್ಶಿಸುತ್ತಾ ಕೊಳಕು ಲೈಂಗಿಕ ಭಾಷೆಯನ್ನೇ ಹೇಳುತ್ತಾ ಬರುವುದು. ಈಚೆ ಮನೆಯವನ ಹೆಂಡತಿಯನ್ನು ಆಚೆ ಮನೆಯವನು ತಬ್ಬಿಕೊಳ್ಳುವುದು, ಆಚೆ ಮನೆಯವನ ಹೆಂಡತಿಗೆ ಈ ಕಡೆಯವನು ಸನ್ನೆ ಮಾಡುವುದು... ನಮ್ಮ ಮನೆ ಮಂದಿಗೆಲ್ಲ ಉಸಿರು ಕಟ್ಟತೊಡಗಿತು. ಆ ತರದ ಹಾಸ್ಯಕ್ಕೆ ಅಡಿಯಾಳಾಗಿ ಹೋಗಿದ್ದ ನಮ್ಮ ಬಂಧುಗಳ ಕುಟುಂಬ ಮಾತ್ರ ಎಗ್ಗಿಲ್ಲದೆ ತಾನೂ ನಗುತ್ತಾ ನಮ್ಮ ಉಸಿರನ್ನು ಇನ್ನಷ್ಟು ಕಟ್ಟಿಸಿತು. ಇದು ಹಾಸ್ಯವಲ್ಲ ಅಶ್ಲೀಲತೆ ಕಣ್ರೀ ಎಂದು ಉಪದೇಶಿಸಲು ಹೊರಟ ನನ್ನ ಮಾತನ್ನು ಅವರ್‍ಯಾರೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಕಾಮಿಡಿ ಷೋ ಕೊಡಲು ಬರುವ ಸ್ಪರ್ಧಿಗಳಲ್ಲಿ ಸ್ತ್ರೀ ಪಾತ್ರ ಧರಿಸಿ ಬರುವ ಗಂಡಸರು. ಅವರ ಕೆಟ್ಟ ಆಂಗಿಕ ಭಂಗಿಗಳನ್ನು ದ್ವಂದ್ವಾರ್ಥದ ಸಂಭಾಷಣೆಗಳನ್ನು ಸಹಿಸಿಕೊಂಡು ನಗುತ್ತ ಕುಳಿತ ತೀರ್ಪುಗಾರರ ಮೇಲೆ ನನಗೆ ಎಲ್ಲಿಲ್ಲದ ಸಿಟ್ಟು ಬರುತ್ತಿತ್ತು. ನಿತ್ಯ ಸಿಟ್ಟು ಒಳ್ಳೇದಲ್ಲ. ಬಿಪಿ ಮಾತ್ರೆ ತಗೊಳ್ಳುವ ಹಂತಕ್ಕೆ ತಲುಪಿಯಾಯ್ತು.

ಈ ದೃಶ್ಯ ಮಾಧ್ಯಮಗಳ ಅದರಲ್ಲೂ ಸಾಮಾಜಿಕ ಜಾಲತಾಣಗಳ ಅಟ್ಟಹಾಸ ಪ್ರಾರಂಭವಾಗುವ ಮೊದಲು ಮುದ್ರಣ ಮಾಧ್ಯಮದಲ್ಲಿ 'ಓದುವ ಸುಖ'ವನ್ನು ಹೆಚ್ಚಿನ ಸಾಹಿತ್ಯಾಸಕ್ತರು ಮನೆಗಳಲ್ಲಿ ಲೈಬ್ರರಿಗಳಲ್ಲಿ ಕೂತು ಓದುವುದರ ಮೂಲಕ ಪಡೆಯುತ್ತಿದ್ದರು. ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಓದುವ, ವಿಮರ್ಶಿಸುವ ಬೇರೆಯವರಿಗೆ ಅದರ ಕುರಿತು ಹೇಳುವ ಒಂದು ಸತ್ಪರಂಪರೆಯ ವ್ಯಕ್ತಿಗಳು ಪ್ರತಿ ಊರಿನಲ್ಲಿಯೂ ಸಿಗುತ್ತಿದ್ದರು. ಅರಳಿಕಟ್ಟೆಯಲ್ಲಿ ಹರಟುವ ಹಳ್ಳಿಗರು, ಯಕ್ಷಗಾನ, ದೊಡ್ಡಾಟ, ಅಂಟಿಗೆಪಂಟಿಗೆ, ಹರಿಕಥೆ, ಕಥಾ ಕಾಲಕ್ಷೇಪ, ಹಾಡು ಹಸೆ... ಹೀಗೆ ಮನರಂಜನೆಗೆ ಹಲವಾರು ಜಾನಪದ ವಿಧಾನಗಳನ್ನು ಕಂಡುಕೊಂಡಿದ್ದರು. ಟೀವಿ ಎಂಬ ಮೂರ್ಖರ ಪೆಟ್ಟಿಗೆ ಎಂದು ಮನೆ ಮನೆಯ ಜಗುಲಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತೋ ಅಂದೇ ಈ ಎಲ್ಲ ಜಾನಪದ ಕಲಾ ಪ್ರಕಾರಗಳ ಅವಸಾನ ಪ್ರಾರಂಭವಾಯಿತು. ಮುಂದೊಂದು ದಿನ ಈ ಎಲ್ಲಾ ಕಲಾ ಪ್ರಕಾರಗಳನ್ನು ತನ್ನ ಕಬಂಧ ಬಾಹುಗಳ ಒಳಗೆ

